ನಗರ ಡಿವಿಜ್ಞ ಡಿಸ್ಟ್ರಿಕ್ಟ್ ಜಡ್ಜಿಯವರ ಕೋರ್ಟಿನಲ್ಲಿ.

1894—95ನೇ ಇಸವಿ ಅರ್ಜಿ ನಂಬರ್ 178.

ಮೃತಪಟ್ಟ ಪರಿವಾರದ ಲಿಂಗಪ್ಪನವರ ಆಸ್ತೀ ವಿಷಯದಲ್ಲಿ.—

ಅರ್ಜೀದಾರು ಪರಿವಾರದ ಕೋಟೆಪ್ಪನು, ಮೃತಪಟ್ಟ ಸದರೀ ಲಿಂಗಪ್ಪನವರಿಗೆ ದೊಡ್ಡಪ್ಪನ ಮಗನು ಆಗಬೇಕೆಂಬ ಹಕ್ಕುದಾರಿ ಮೇಲೆ ಶಿವಮೊಗ್ಗಾ ಸ್ಥಳದ ಪರಿವಾರದ ಕೋಟೆಪ್ಪನು, ಶಿವಮೊಗ್ಗ ವಾಸಸ್ಥರಾಗಿ ಮೃತಪಟ್ಟ ಪರಿವಾರದ ಲಿಂಗಪ್ಪನವರ ಜಿಂದಗಿ ಬಗ್ಯಾಗಿ ಬರತಕ್ಕ 800 ರೂಪಾಯಿ ಸಾಲವನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಪರಿವಾರದ ಕೋಟೆಪ್ಪನ ಅರ್ಜಿಯನ್ನು 1895ನೇ ಇಸವಿ ಮಾರ್ಚಿ ತಿಂಗಳ ತಾರೀಖು 29ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಪರಿವಾರದ ಲಿಂಗಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಸಿಪ್ಪರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ರ 1895ನೇ ಇಸವಿ ಮಾರ್ಚಿ ತಿಂಗಳ 19ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

1894—95ನೇ ಇಸವಿ ಅರ್ಜಿ ನಂಬರ್ 188.

ಮೃತಪಟ್ಟ ಅಯ್ಯಾಜಿಯಾನೆ ಚೆನ್ನಬಸಪ್ಪಗವುಡರ ಆಸ್ತೀ ವಿಷಯದಲ್ಲಿ—

ಅರ್ಜಿದಾರು 1ನೇ ಗವರವ್ಮ 2ನೇ ಅಕ್ಕ ನಾಗವ್ಮ ಕೊಂ ಅಯ್ಯಾಜಿಯಾನೆ ಚೆನ್ನಬಸಪ್ಪಗವುಡ ಮೃತಪಟ್ಟ ಸದರೀ ಅಯ್ಯಾಜಿಯಾನೆ ಚೆನ್ನಬಸಪ್ಪಗವುಡರಿಗೆ ಇಬ್ಬರು ಹೆಂಡರು ಆಗಬೇಕೆಂಬ ಹಕ್ಕುದಾರಿ ಮೇಲೆ ಸೊರಬ ತಾಲ್ಲೂಕು ಕಸಬಾ ಮಾಗಣಿ ವುದ್ರಿ ಸ್ಥಳದ 1ನೇ ಗವರವ್ಮ 2ನೇ ಅಕ್ಕ ನಾಗವ್ಮ ಇವರು, ಡಿಟೋ ತಾಲ್ಲೂಕು ವುದ್ರಿ ವಾಸಸ್ಥರಾಗಿ ಮೃತಪಟ್ಟ ಅಯ್ಯಾಜಿಯಾನೆ ಚೆನ್ನಬಸಪ್ಪಗವುಡರ ಜಿಂದಗಿ ಬಗ್ಯಾಗಿ ಬರತಕ್ಕ 10,000 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ 1ನೇ ಗವರವ್ಮ 2ನೇ ಅಕ್ಕ ನಾಗವ್ಮ ಇವರ ಅರ್ಜಿಯನ್ನು 1895ನೇ ಇಸವಿ ಮೇ ತಿಂಗಳ ತಾರೀಖು 31ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸದರೀ ಚೆನ್ನಬಸಪ್ಪಗವುಡರ ಆಸ್ತಿಗೆ ಹಕ್ಕುದಾರರಾದ ವಿಸಿಪ್ಪರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1895ನೇ ಇಸವಿ ಮಾರ್ಚಿ ತಿಂಗಳ 20ನೇ ತಾರೀಖಿನಲ್ಲಿ ಕೋರ್ಟ್ ಮೊಹರ್ ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಬಿ. ತಿರುಮಲಾಚಾರ್,
ಡಿಸ್ಟ್ರಿಕ್ಟ್ ಜಡ್ಜ್.

ನೋಟಿಫಿಕೇಷನ್.

ಕಡೂರು ಡಿಸ್ಟ್ರಿಕ್ಟ್.

ತಾರೀಖು 11ನೇ ಮಾರ್ಚಿ 1895ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಮಾಹೆ ಮಜಕೂರು ತಾರೀಖು 15ರಲ್ಲಿ ತರೀಕೆರೆ ಡಿಪೋದಲ್ಲಿ ಆಗಬೇಕೆಂದು ನಿಶ್ಚೈಸಿದ್ದ ನಾಟುವಗೈರೆ ಹರಾಜನ್ನು 1895ನೇ ಇಸವಿ ಏಪ್ರಿಲ್ 22ಕ್ಕೆ ಅಡ್ಜರ್ನ್ ಮಾಡಿರುತ್ತೆ.

ಸಿ. ಎಂ. ರಸ್ಸೆಲ್,
ಡೆಪ್ಯೂಟಿ ಕನ್ಸರ್ವೇಟರ್ ಆಫ್ ಫಾರೆಸ್ಟ್ಸ್.

ಮಿಶ್ರವಿಲ್ಲದ ಸಲ್ಫೇಟ್ ಆಫ್ ಕ್ವಿನಿಯ್ನ್ ಯಂಬ ಔಷಧ.

ಬಂಗಾಳಾ ಗವರ್ನ್ಮೆಂಟಿನ ಕಿಂಕೋನಾ ಪ್ಲಾಂಟೇಷನಿನಲ್ಲಿ ತಯಾರ್ಮಾಡಲ್ಪಟ್ಟದ್ದು.

ಈ ಕ್ವಿನಿಯನ್ನಿನ ಖರೀದಿಯು ಇದರಡಿ ಕಂಡಂತೆ ಇರುವದು.

ಪೌಂಡ್ ವೆಳ್ಳೆ ಡಬ್ಬಿ 1ಕ್ಕೆ ರೂ. 16 ಅಥವಾ ಟಪ್ಪಾಲ್ ಹಾಸಲ್ ದೇಖೀಲ್ ರೂ.

$\frac{1}{2}$	ಡಿಟೋ	ರೂ. 8	ಡಿಟೋ	..	16–12–0
$\frac{1}{4}$	ಡಿಟೋ	ರೂ. 4	ಡಿಟೋ	.. ..	8– 8–0
				.. ..	4– 8–0

ಪರೀಕ್ಷೆಯಲ್ಲಿ ಈ ಕ್ವಿನಿಯ್ನ್ ಕೇವಲ ಶುದ್ಧವಾದದ್ದೆಂಬದಾಗಿ ಕಂಡುಬಂದಿರುತ್ತೆ; ಮತ್ತು ಕೀಳ್ ತರಹೇದ ಕಿಲಬು ಪದಾರ್ಥವನ್ನು ಸಿಂಕೋನಾ ಸಂಬಂಧವಾದ ಕೆಟ್ಟ ಭಸ್ಮಗಳು ಮನಃಪೂರ್ತಿಯಾಗಿ ವಿಶ್ಲ ಮಾಡಲ್ಪಡದೆಯೂ ಖಾತರ್ ಮಾಡಲ್ಪಟ್ಟಿರುತ್ತೆ. ಇದರನ್ನ ಗವರ್ನ್ಮೆಂಟ್ ಆಫಿಸರರುಗಳಿಗೆ ನಗದ ಖರೀದಿಗೆ ಮಾತ್ರ ಕಲ್ಕತ್ತಾ ಬಳಿಯಾಣ ಸೀಬ್ ಪುರದಲ್ಲಿರುವ ಬೊಟಾನಿಕಲ್ ಗಾರ್ಡ್ನ್ ಯಾ ತೋಟದ ಸೂಪರ್ಟೆಂಡೆಂಟರವರಿಂದ ಸರಬರಾಯಿ ಮಾಡಲ್ಪಡುವದು. ಬಿಳೇ ಬಂಣದ್ದಾಗಲಿ ಅಥವಾ ಕಪ್ಪಿನ ಮೇಲೆ ವಿಶ್ಲಬಂಣದ್ದಾಗಲಿ ಪಡೆಯಬಹುದು.